1734826/2020/O/o PMU-UDD

## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 292 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22-09-2020 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಘನತ್ಯಾಜ್ಯ ನಿರ್ವಹಣೆ ಇತ್ತಿಚೆಗೆ ಒಂದು ದೊಡ್ಡ ಸಮಸೆಯಾಗಿದ್ದು, ಅದರ ನಿರ್ವಹಣೆಗೆ ಸೂಕ್ತ ಫಲಿತಾಂಶಗಳು ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಘನ ತ್ಯಾಜ್ಯ ವಸ್ತು ಉತ್ಪಾದನೆ ಪ್ರಮಾಣದಿಂದಾಗಿ ಮತ್ತು ಸಂಕೀರ್ಣ ಸಂಯೋಜನೆಯಿಂದಾಗಿ ಬಹು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿರುತ್ತದೆ. ಘನ ತ್ಯಾಜ್ಯ ವಸ್ತು ನಿರ್ವಹಣೆ ಯೋಜನೆಯನ್ನು ರಾಜ್ಯದಲ್ಲಿ 2005ನೇ ಸಾಲಿನಿಂದ ಪ್ರಾರಂಭಿಸಲಾಗಿದ್ದು, ಘನ ತ್ಯಾಜ್ಯ ವಸ್ತು ನಿರ್ವಹಣೆಗೆ ಅಗತ್ಯ ನೆಲಭರ್ತಿ ಜಾಗವನ್ನು ಹೊಂದುವುದು, ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆ ಮುಂತಾದವುಗಳನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯ ಇರುವ ವಾಹನಗಳನ್ನು ಬಳಸಿ ಶುರು ಮಾಡಲಾಗಿರುತ್ತದೆ. ಆದರೆ ಘನ ತ್ಯಾಜ್ಯ ವಸ್ತು ನಿರ್ವಹಣೆಗೆ ಹೆಚ್ಚಿನ ಅನುದಾನದ ಅವಶ್ಯಕತೆ, ಸಮಗ್ರ ಯೋಜನೆಯ ಕೊರತೆ, ಮೂಲದಲ್ಲಿಯೇ ತ್ಯಾಜ್ಯ ಬೇರ್ಪಡುವಿಕೆ ಮಾಡಲು ಸಾರ್ವಜನಿಕರಿಂದ ನಿರಾಸಕ್ತಿ ಮತ್ತು ಅತಿಯಾದ ಕಾರ್ಯಾಚರಣೆ ಹಾಗೂ ನಿರ್ವಹಣೆ ವೆಚ್ಚದಿಂದಾಗಿ ಸೂಕ್ತ ಫಲಿತಾಂಶ ಸಿಗತ್ತಿಲ್ಲವೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಹಾಲಿ ಘನ ತ್ಯಾಜ್ಯ ವಸ್ತು ನಿರ್ವಹಣೆ ಅನುಷ್ಠಾನದ ವಿವರಗಳು ಕೆಳಕಂಡಂತಿವೆ. |

| ನಗರ ಸ್ಥಳೀಯ ಸಂಸ್ಥೆಗಳು | ತ್ಯಾಜ್ಯ ಉತ್ಪಾದನೆ(ಟಿ.ಪಿ.ಡಿ) | ಒಟ್ಟು ವಾರ್ಡುಗಳ ಸಂಖ್ಯೆ | ಮನೆ-ಮನೆಯಿಂದ ತ್ಯಾಜ್ಯ ಸಂಗ್ರಹಣೆ | ಮನೆ-ಮನೆಯಿಂದ ತ್ಯಾಜ್ಯ ವಿಗಂಡಣೆ | ತ್ಯಾಜ್ಯ ಸಂಸ್ಕರಣೆ (ಟಿ.ಪಿ.ಡಿ) |
|---|---|---|---|---|---|
| 283 | 6399 ಟನ್‌ಗಳು | 6731 ವಾರ್ಡ್‌ಗಳು | 6286 ವಾರ್ಡ್‌ಗಳು (93 %) | 4073 ವಾರ್ಡ್‌ಗಳು (58.78%) | 3238 ಟನ್‌ಗಳು (50.60%) |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ | ರಾಜ್ಯದ ಎಷ್ಟು ಭಾಗಗಳಲ್ಲಿ ಘನತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆ. ಅವುಗಳೆಲ್ಲವೂ ಹಾಲಿ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿವೆಯೇ: | ರಾಜ್ಯದಲ್ಲಿ 283 ನಗರ ಸ್ಥಳೀಯ ಸಂಸ್ಥೆಗಳಲ್ಲಿ (4 NAC ಮತ್ತು BBMP ಹೊರತು ಪಡಿಸಿ) 6399 ಟನ್‌ಗಳಷ್ಟು ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು ಈ ಪೈಕಿ 171 ನಗರಗಳಲ್ಲಿ ಘನ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಆದರೆ ರಾಜ್ಯದ ಯಾವುದೇ ನಗರದಲ್ಲಿ ತಮ್ಮಲ್ಲಿ ಉತ್ಪಾದನೆಯಾಗುತ್ತಿರುವ ಎಲ್ಲಾ ತ್ಯಾಜ್ಯವನ್ನು ಪೂರ್ಣ ಪ್ರಮಾಣದಲ್ಲಿ ಸಂಸ್ಕರಿಸಲು ಅಗತ್ಯ ತ್ಯಾಜ್ಯ ಸಂಸ್ಕರಣಾ ಸೌಲಭ್ಯಗಳು ಲಭ್ಯವಿರುವುದಿಲ್ಲ. ಅದರಂತೆ ಲಭ್ಯವಿರುವ ತ್ಯಾಜ್ಯ ಸಂಸ್ಕರಣಾ ಸೌಲಭ್ಯಗಳಿಂದ ಪ್ರತಿದಿನ 3238 ಟನ್‌ಗಳಷ್ಟು ತ್ಯಾಜ್ಯ ಸಂಸ್ಕರಣೆ ಮಾಡಲಾಗುತ್ತಿದೆ.<br><br>ಆದುದರಿಂದ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮಗ್ರ ಘನತ್ಯಾಜ್ಯ ವಸ್ತು ನಿರ್ವಹಣೆ ಯೋಜನೆಯ ಅನುಷ್ಠಾನವನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಅಗತ್ಯವಿರುವ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಮುಂದಿನ 5 ವರ್ಷಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಉತ್ಪಾದಿಸಬಹುದಾದ ತ್ಯಾಜ್ಯದ ಪ್ರಮಾಣವನ್ನು ಪರಿಗಣಿಸಿ ಹೆಚ್ಚುವರಿಯಾಗಿ 3351 ಟನ್‌ಗಳ ಸಾಮರ್ಥ್ಯದ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಅಭಿವೃದ್ಧಿ ಪಡಿಸಲು ಹಾಗೂ ಶೇ. 100 ರಷ್ಟು ಪ್ರಾಥಮಿಕ ತ್ಯಾಜ್ಯ ಸಂಗ್ರಹಣೆ, ಸಾಗಣೆ ಮಾಡಲು ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ ಡಿ.ಪಿ.ಆರ್ ಗಳನ್ನು ಸಿದ್ಧಪಡಿಸಲಾಗುತ್ತಿದೆ. |

| | | |
|---|---|---|
| ಇ | ಉಳಿದ ನಗರ ಕೇಂದ್ರಗಳಲ್ಲಿ ಯಾವ ಕಾಲಮಿತಿಯಲ್ಲಿ ಘನತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಹಾಗೂ ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು; | ಈಗಾಗಲೇ 218 ನಗರ ಸ್ಥಳೀಯ ಸಂಸ್ಥೆಗಳ ರೂ.1044.76 ಕೋಟಿಗಳ ಮೊತ್ತದ ಡಿ.ಪಿ.ಆರ್ ಗಳಿಗೆ ಅನುಮೋದನೆ ನೀಡಲಾಗಿದ್ದು, ಅನುಷ್ಠಾನದ ವಿವಿಧ ಹಂತಗಳಲ್ಲಿರುತ್ತದೆ. ಜಿಲ್ಲಾವಾರು ಅನುಷ್ಠಾನದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿರುತ್ತದೆ. ರಾಜ್ಯದಲ್ಲಿನ ಉಳಿಕೆ 65 ನಗರಗಳಲ್ಲಿ ಸಮಗ್ರ ಘನತ್ಯಾಜ್ಯ ವಸ್ತು ನಿರ್ವಹಣೆ ಮಾಡಲು ಡಿ.ಪಿ.ಆರ್ ಗಳನ್ನು ಸಿದ್ಧಪಡಿಸಲು ಏಜನ್ಸಿಗಳನ್ನು ಆಯ್ಕೆ ಮಾಡಲಾಗಿರುತ್ತದೆ.<br><br>ರಾಜ್ಯದಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ 31-3-2021 ರೊಳಗಾಗಿ ಘನ ತ್ಯಾಜ್ಯ ವಸ್ತು ನಿರ್ವಹಣೆ ಯೋಜನೆಯ ಅನುಷ್ಠಾನ ಪೂರ್ಣಗೊಳಿಸಬೇಕಿದ್ದು. ಪ್ರಸ್ತುತ ಕೋವಿಡ್ ಪರಿಸ್ಥಿತಿಯಿಂದಾಗಿ ಅನುಷ್ಠಾನ ಪ್ರಕ್ರಿಯೆಯು ಕುಂಠಿತಗೊಂಡಿದ್ದು, ಅದನ್ನು ತ್ವರಿತಗೊಳಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ. |
| ಈ | ಈ ಯೋಜನೆಯ ರೂಪು ರೇಷಗಳ ಬಗ್ಗೆ ವಿವರವಾದ ಮಾಹಿತಿ ನೀಡುವುದು. ಸದರಿ ಯೋಜನೆಯ ಅನುಷ್ಠಾನಕ್ಕೆ ಸರ್ಕಾರದಿಂದ ಎಷ್ಟು ಹಣವನ್ನು ಮೀಸಲಿಡಲಾಗಿದೆ? | ಕೇಂದ್ರ ನಗರಾಭಿವೃದ್ಧಿ ಸಚಿವಾಲಯವು ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯನ್ನು ಅಕ್ಟೋಬರ್ 02, 2014 ರಿಂದ ಜಾರಿಗೆ ತಂದಿದ್ದು, ಮಾರ್ಚ್-2021 ವರೆಗೆ ಜಾರಿಯಲ್ಲಿರುತ್ತದೆ. ಸ್ವಚ್ಛ ಭಾರತ್ ಮಿಷನ್(ನಗರ) ಅಡಿಯಲ್ಲಿ ನಗರ ನೈರ್ಮಲ್ಯದ ಘಟಕಗಳ ಪೈಕಿ, ಘನ ತ್ಯಾಜ್ಯ ವಸ್ತು ನಿರ್ವಹಣೆಯು ಪ್ರಮುಖ ಯೋಜನೆಯಾಗಿರುತ್ತದೆ. ಅದರಂತೆ, ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಶೇ. 100ರಷ್ಟು ಘನ ತ್ಯಾಜ್ಯ ವಸ್ತು ನಿರ್ವಹಣೆ ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಡಿ.ಪಿ.ಆರ್ ಗಳನ್ನು ಸಿದ್ಧಪಡಿಸಿ, ಉನ್ನತಾಧಿಕಾರಯುಕ್ತ ಸಮಿತಿಯ ಅನುಮೋದನೆ ಪಡೆಯಬೇಕಿರುತ್ತದೆ. ಅನುಮೋದಿತ ಡಿ.ಪಿ.ಆರ್ ಮೊತ್ತದ ಶೇ. 58.33 ರಷ್ಟು ಮೊತ್ತವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನವಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ಒದಗಿಸಲಾಗುತ್ತಿದೆ. ಉಳಿಕೆ ಮೊತ್ತವನ್ನು 14ನೇ ಹಣಕಾಸು ಆಯೋಗದ ಅನುದಾನ, ರಾಜ್ಯ ಹಣಕಾಸು ಆಯೋಗ, ನಗರೋತ್ಥಾನ ಮುಂತಾದ ಅನುದಾನಗಳಿಂದ ಪಡೆಯಲು ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚನೆ ನೀಡಲಾಗಿರುತ್ತದೆ.<br><br>ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿ.ಪಿ.ಆರ್) ಸಿದ್ಧಪಡಿಸಲು ತಿಳಿಸಲಾಗಿದ್ದು, ಇದುವರೆವಿಗೂ ಬಿ.ಬಿ.ಎಂ.ಪಿ. ಒಳಗೊಂಡಂತೆ ಒಟ್ಟು 218 ನಗರ ಸ್ಥಳೀಯ ಸಂಸ್ಥೆಗಳು ಡಿ.ಪಿ.ಆರ್. ಗಳನ್ನು ಸಿದ್ಧಪಡಿಸಿ ಸಲ್ಲಿಸಿದ್ದು, ಸದರಿ ವಿಸ್ತೃತ ಯೋಜನಾ ವರದಿಗಳಿಗೆ (ಒಟ್ಟು ಅಂದಾಜು ಮೊತ್ತ - ರೂ. 1501.31 ಕೋಟಿಗಳು ಹಾಗು ಒಟ್ಟು ಸಾಮರ್ಥ್ಯ 9159 ಟಿಪಿಡಿ) ರಾಜ್ಯ ಮಟ್ಟದ ಸ್ವಚ್ಛ ಭಾರತ್ ಮಿಷನ್ ತಾಂತ್ರಿಕ ಸಮಿತಿ ಹಾಗೂ ಹೈಪವರ್ ಕಮಿಟಿಯು ಅನುಮೋದನೆಯನ್ನು ನೀಡಿರುತ್ತದೆ. ಇದುವರೆವಿಗೂ ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ ಘನ ತ್ಯಾಜ್ಯ ವಸ್ತು ನಿರ್ವಹಣೆಗಾಗಿ ರೂ.503.42 ಕೋಟಿಗಳನ್ನು (ಕೇಂದ್ರ ಮತ್ತು ರಾಜ್ಯ ವಂತಿಕೆ) ಬಿಡುಗಡೆ ಮಾಡಲಾಗಿದ್ದು, ಇನ್ನೂ ರೂ.199.01 ಕೋಟಿಗಳನ್ನು ಕೇಂದ್ರದಿಂದ ರಾಜ್ಯಕ್ಕೆ ಬಿಡುಗಡೆ ಮಾಡಬೇಕಿರುತ್ತದೆ. ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರದಿಂದ ರೂ.420.75 ಕೋಟಿಗಳನ್ನು ನ.ಸ್ಥ.ಸಂ. ಗಳಿಗೆ ಬಿಡುಗಡೆ ಮಾಡಬೇಕಿರುತ್ತದೆ. |

ಸಂಖ್ಯೆ: ನಅಇ 266 ಸಿಎಸ್‌ಎಸ್ 2020

(ಬೈರತಿ ಬಸವರಾಜ)
ನಗರಾಭಿವೃದ್ಧಿ ಸಚಿವರು.

| SL no | Name of the District | No of ULBs | Civil works/Vehicles & machieneries | Total No.of works approved in DPR | Estimated Cost | No of works T.S.Obtained | T.S obtained Cost | No of works tender invited | Amount put to tender | Work order issued (No of works) | Amount mentioned in work order | Amount disbursed by DMA | No of works completed | Total Payment made towards completed works | Total Payment made towards completed works | | DMA amount pending in Districts |
|---|---|---|---|---|---|---|---|---|---|---|---|---|---|---|---|---|---|
| | | | | | | | | | | | | | | | DMA Fund | ULB fund | |
| [illegible] | [illegible] | | Vehicles & machieneries | 28 | 931.69 | 28 | 931.69 | 21 | 859.00 | 4 | 442.40 | 308.66 | 3 | 0.00 | 0.00 | 0.00 | 308.66 |
| 23 | Ballari | 16 | Civil works | 128 | 2970.23 | 128 | 2885.95 | 128 | 2727.09 | 55 | 2736.35 | 459.86 | 23 | 18.20 | 18.20 | 0.00 | 441.66 |
| | | | Vehicles & machieneries | 96 | 1848.36 | 27 | 1634.10 | 6 | 30.19 | 1 | 43.73 | 654.07 | 4 | 5.00 | 5.00 | 0.00 | 649.07 |
| | Belagavi Division | | | | | | | | | | | | | | | | |
| 24 | Belagavi | 33 | Civil works | 131 | 1778.08 | 131 | 1766.39 | 131 | 1713.72 | 109 | 1699.48 | 510.29 | 33 | 189.02 | 189.02 | 0.00 | 321.27 |
| | | | Vehicles & machieneries | 64 | 974.04 | 35 | 684.03 | 18 | 216.91 | 12 | 175.37 | 524.31 | 11 | 92.20 | 92.20 | 0.00 | 432.11 |
| 25 | Bagalkote | 15 | Civil works | 76 | 1289.02 | 76 | 1318.39 | 74 | 1284.62 | 51 | 1089.08 | 341.56 | 41 | 376.88 | 341.56 | 35.32 | 0.00 |
| | | | Vehicles & machieneries | 105 | 1830.41 | 104 | 1824.80 | 104 | 1828.49 | 4 | 1617.47 | 587.01 | | 0.00 | 0.00 | 0.00 | 587.01 |
| 26 | Bijapura | 14 | Civil works | 8 | 955.89 | 8 | 955.89 | 8 | 955.89 | 8 | 921.90 | 205.32 | 0 | 112.65 | 112.65 | 0.00 | 92.67 |
| | | | Vehicles & machieneries | 43 | 814.18 | 43 | 676.87 | 32 | 676 87 | 27 | 146.25 | 174.48 | 28 | 278.43 | 174.48 | 103 95 | 0.00 |
| 27 | Dharwad | 6 | Civil works | 60 | 2782.35 | 59 | 2781.34 | 57 | 2759.77 | 56 | 2748.88 | 209.67 | 35 | 1621.23 | 209.67 | 1411.56 | 0.00 |
| | | | Vehicles & machieneries | 35 | 3053.20 | 33 | 2966.30 | 27 | 2946.31 | 7 | 2421.41 | 569.43 | 10 | 792.05 | 569.43 | 222.62 | 0.00 |
| 28 | Gadag | 9 | Civil works | 129 | 1483.24 | 129 | 1483.24 | 129 | 1471.27 | 129 | 1193 43 | 469.49 | 0 | 0.00 | 0.00 | 0.00 | 469.49 |
| | | | Vehicles & machieneries | 110 | 1353.97 | 110 | 1353.97 | 86 | 1348.42 | 85 | 555.94 | 520.02 | 18 | 0.00 | 0.00 | 0.00 | 520.02 |
| 29 | Haveri | 10 | Civil works | 144 | 1552.36 | 112 | 1291.74 | 92 | 933 25 | 51 | 862.49 | 324.25 | 35 | 136.85 | 136.85 | 0.00 | 187.40 |
| | | | Vehicles & machieneries | 97 | 1271.61 | 38 | 802.89 | 20 | 533.22 | 18 | 463.91 | 356 52 | 20 | 450.22 | 356.52 | 93.70 | 0.00 |
| 30 | Uttar Kannada | 12 | Civil works | 118 | 2082.72 | 113 | 2071.09 | 93 | 1458.66 | 42 | 1360.80 | 468.60 | 29 | 80.75 | 80.75 | 0.00 | 387.85 |
| | | | Vehicles & machieneries | 55 | 984.82 | 49 | 953.40 | 45 | 800.96 | 17 | 723.05 | 341.74 | 9 | 32.07 | 32.07 | 0.00 | 309.67 |
| Total | | 288 | Civil works | 2346 | 48728.58 | 2162 | 43072.93 | 1956 | 34773.04 | 1359 | 26429.04 | 7626.45 | 414 | 5372.62 | 3289.36 | 2083.25 | 4337.09 |
| | | | Vehicles & machieneries | 1625 | 32348.15 | 1205 | 26912.57 | 860 | 17699.56 | 424 | 13651.07 | 10715.20 | 251 | 3180.86 | 2801.59 | 502.64 | 7913.61 |
| Grand Total(Both Civil&Vehicle mach) | | | | 3971 | 81076.73 | 3367 | 69985.49 | 2816 | 52472.60 | 1783 | 40080.11 | 18341.65 | 665 | 8553.48 | 6090.95 | 2585.89 | 12250.70 |